ಅವುಗಳು ಬೆಳೆಗಳನ್ನು ಹಾಳು ಮಾಡುವುದಕ್ಕೆ ಅವಕಾಶ ಮಾಡಿಕೊಡಬಾರದು. ಇದರಿಂದ ರೈತರು ಕಂಗಾಲಾಗಿದ್ದಾರೆ. ಇವುಗಳ ಹಾವಳಿಯಿಂದ ಏನು ಬೆಳೆ ನಷ್ಟವಾಗಿದೆ, ಹಾಗೂ ಪ್ರಾಣಹಾನಿಯಾಗಿದೆ ಅದಕ್ಕೆ ಸರ್ಕಾರದವರು ಏನು ಪರಿಹಾರ ಕೊಡುತ್ತೀರಿ?

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ಅವರು ಶ್ರೀರಂಗಪಟ್ಟಣದ ಹಂದಿ ವಿಷಯ ಹೇಳುತ್ತಿರುವುದು, ಆನೇಕಲ್ ಹಂದಿ ವಿಷಯವಲ್ಲ.

ಶ್ರೀ ಸಿ. ಚೆನ್ನಿಗಪ್ಪ : ಹಂದಿಗಳೆಲ್ಲಾ ಒಂದೆ. ಶ್ರೀರಂಗಪಟ್ಟಣದು ಬೇರೆ ಅಲ್ಲ.

ಅಧ್ಯಕ್ಷರು : ತೊಂದರೆಯಾಗಿರುವುದು ಶ್ರೀರಂಗಪಟ್ಟಣದಲ್ಲಿ. ನಿಮಗೆ ತೊಂದರೆ ಆಗಿದ್ದರೆ ನೀವು ಬೇರೆ ಪ್ರಶ್ನೆ ಕೇಳಿ.

ಶ್ರೀ ಕೆ.ಬಿ. ಕೋಳಿವಾಡ್ : ಅಲ್ಲಿ ಫೆನ್ಸಿಂಗ್ ಹಾಕಿ ಹಂದಿಗಳು ಹೊಲದ ಕಡೆ ಬರದೇ ಇರುವ ಹಾಗೆ ಏನಾದರೂ ಯೋಜನೆ ಮಾಡಿದ್ದೀರೋ ಹೇಗೆ? ಎಲ್ಲಾ ತಾಲ್ಲೂಕಿಗೆ ಫಾರೆಸ್ಟ್ ಏರಿಯಾ ಬೌಂಡ್ರಿಗೆ ಫೆನ್ಸಿಂಗ್ ಹಾಕುವಂತಹ ವಿಚಾರ ಏನಾದರೂ ಸರ್ಕಾರದ ಮುಂದೆ ಇದೆಯೇ?

ಶ್ರೀ ಕೆ.ಹೆಚ್. ರಂಗನಾಥ್ : ಅದು ಅಷ್ಟು ಸುಲಭ ಎಂದು ತಿಳಿದುಕೊಂಡಿದ್ದೀರಾ. ಇನ್ನೇನು ಅಮೇರಿಕಾ ಸರ್ಕಾರ ಎಂದು ತಿಳಿದುಕೊಂಡಿದ್ದೀರಾ? ಗುಡ್ಡಕ್ಕೆ ಹಚ್ಚಡ ಹೊದಿಸುವುದಕ್ಕೆ ಅದೆಲ್ಲಾ ಆಗುವುದಿಲ್ಲ. ಎಲ್ಲಿಂದ ಎಲ್ಲಿಯವರೆಗೆ ಬೇಲಿ ಹಾಕುವುದು? ಅದಕ್ಕೆ ಹಣ ಹಾಗೂ ತಂತಿ ಎಲ್ಲಿಂದ ತರುವುದು. ಅದು ಆಗುವುದಿಲ್ಲ. ಈ ಕಾಡು ಹಂದಿಗಳನ್ನು ಉಳಿಸಿಕೊಳ್ಳಬೇಕು, ಎನ್ನುವ ದೃಷ್ಟಿಯಿಂದ ಒಂದು ಕಾನೂನು ಇದೆ. ಆದರೆ ಬೆಳೆ ನಾಶವಾಗುತ್ತಿದ್ದರೆ, ಮನುಷ್ಯರಿಗೆ ಹಾನಿ ಮಾಡುತ್ತಿದ್ದರೆ, ಆ ಪ್ರಾಣಿಗಳ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುವಂಥಾದ್ದರ ಬಗ್ಗೆ ಅಂದರೆ ಅದನ್ನು ಕೊಲ್ಲುವಂಥಾದ್ದಕ್ಕೂ ಕಾನೂನಿನಲ್ಲಿ ಅವಕಾಶವಿದೆ ಎಂದು ನನಗೆ ತಿಳಿದು ಬಂದಿದೆ. ಆದುದರಿಂದ ಅದನ್ನು ಪರಿಶೀಲನೆ ಮಾಡಿ ಎಲ್ಲೆಲ್ಲಿ ಇಂತಹ ಅನಾಹುತಗಳು ಜಾಸ್ತಿಯಾಗುತ್ತಿದೆ, ಅಲ್ಲಿ ಕ್ರಮ ತೆಗೆದುಕೊಳ್ಳುವಂಥಾದ್ದು ಮಾಡಬೇಕೆಂದು ಇದ್ದೇನೆ.

## ವಿವಿಧ ಪ್ರದೇಶಕ್ಕೆ ಅನುಗುಣವಾಗಿ ಯೋಜನೆಗಳು

583 - ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ವಿವಿಧ ಪ್ರದೇಶಗಳಿಗೆ ಒಂದೇ ರೀತಿಯ ಯೋಜನೆಗಳನ್ನು ಜಾರಿಗೆ ತರುವುದರಿಂದ ಅದು ವೈಫಲ್ಯವಾಗುವುದಿಲ್ಲವೆ?*

*ಆ) ಹಾಗಿದ್ದಲ್ಲಿ ವಿವಿಧ ಯೋಜನೆಗಳನ್ನು ತಯಾರಿಸುವಾಗ ಬಯಲುಸೀಮೆ ಕರಾವಳಿ ಪ್ರದೇಶಗಳಿಗೆ ಪ್ರತ್ಯೇಕವಾದ ಯೋಜನೆಗಳ ಅಗತ್ಯವಿರುವುದನ್ನು ಸರ್ಕಾರ ಮನಗಂಡಿದೆಯೇ?*

*ಇ) ಮನಗಂಡಿದ್ದಲ್ಲಿ ಪ್ರದೇಶಕ್ಕೆ ತಕ್ಕಂತೆ ಯೋಜನೆಗಳನ್ನು ತಯಾರಿಸಲಾಗುವುದೇ?*

ಶ್ರೀಮತಿ ಸುಮಾ ವಸಂತ್ (ಯೋಜನಾ ರಾಜ್ಯ ಸಚಿವರು) :

ಅ) ಇಲ್ಲ. ಪ್ರತೀ ಪ್ರದೇಶದ ಅಗತ್ಯವನ್ನಾಧರಿಸಿ ಯೋಜನೆಗಳನ್ನು ಅನುಷ್ಠಾನ-ಗೊಳಿಸಲಾಗುವುದು.

ಆ) ರಾಜ್ಯ ಯೋಜನೆ ಹಾಗೂ ಜಿಲ್ಲಾ ಪರಿಷತ್ ಯೋಜನೆಗಳ ಜೊತೆಗೆ ಪ್ರದೇಶ ಯೋಜನೆಯನ್ನು ಬಯಲುಸೀಮೆಗೆ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯು ಮತ್ತು ಕರಾವಳಿ ಪ್ರದೇಶಗಳಿಗೆ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯು ತಯಾರಿಸುತ್ತದೆ. ಕರಾವಳಿಯ ಎಲ್ಲಾ ಪ್ರದೇಶಗಳು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಯೊಳಗೆ ಬರುತ್ತದೆ.

ಇ) ಪ್ರದೇಶಾಭಿವೃದ್ಧಿ ಮಂಡಳಿಗಳಿಂದ ಪ್ರದೇಶಾಭಿವೃದ್ಧಿ ಯೋಜನೆಗಳನ್ನು ತಯಾರಿಸಿ ಅನುಷ್ಠಾನಗೊಳಿಸಲಾಗುತ್ತದೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯ ಮೂಲ ಉದ್ದೇಶ ಏನೆಂದರೆ ಪ್ರದೇಶಗಳ ಅಗತ್ಯವನ್ನು ಆಧರಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕೆಂದು ಕೇಳಿದ್ದೆ. ಅದಕ್ಕೆ ಸರ್ಕಾರದವರು ಅನುಷ್ಠಾನಗೊಳಿಸಲಾಗುವುದೆಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳುವಂಥಾದ್ದು ಏನೆಂದರೆ ಭೂ ಪರಿಸ್ಥಿತಿಗೆ, ಜನಜೀವನಕ್ಕೆ ಸರಿಯಾಗಿ ಯೋಜನೆಗಳನ್ನು ಹಾಕಿಕೊಳ್ಳಬೇಕು. ನಮ್ಮ ಮಲೆನಾಡು ಪ್ರದೇಶ, ದಕ್ಷಿಣ ಕನ್ನಡ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅತಿ ಪ್ರಾಮುಖ್ಯವಾಗಿ ಕುಡಿಯುವ ನೀರಿನ ಯೋಜನೆಗಳು ಆಗಬೇಕು. ನಮ್ಮ ಬಯಲು ಸೀಮೆಯಲ್ಲಿ ಸುಮಾರು ಮನೆಗಳು ಇವೆ. ಅಲ್ಲಿ ಕುಡಿಯುವ ನೀರಿನ ದೊಡ್ಡ ಯೋಜನೆಗಳನ್ನು ಹಾಕಿಕೊಂಡರೆ ಅನುಕೂಲವಾಗುತ್ತದೆ. ಆದರೆ ನಮ್ಮ ಜಿಲ್ಲೆಗಳಲ್ಲಿ, ಹಳ್ಳಿಗಳಲ್ಲಿ ಮನೆಗಳು ವಿರಳವಾಗಿರುತ್ತವೆ. ಆದರ ವೆಚ್ಚ ಅನುಪಾತದ ಪ್ರಕಾರ ಜನರಿಗೆ ಉಪಯೋಗಕ್ಕೆ ಬರುವುದಿಲ್ಲ. ಆದುದರಿಂದ ಇದು ಜನರಿಗೆ ಉಪಯೋಗಕ್ಕೆ ಬರುವಹಾಗೆ ಸಣ್ಣ ಸಣ್ಣ ಕುಡಿಯುವ ನೀರಿನ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳುತ್ತಿದ್ದೇನೆ.

ಶ್ರೀಮತಿ ಸುಮಾ ವಸಂತ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ಪ್ರಾದೇಶಿಕವಾಗಿ ಕೆಲವು ಮಂಡಳಿಗಳನ್ನು ಮಾಡಿ ಆ ಮುಖಾಂತರ ಆ ಪ್ರದೇಶಗಳ ಅಭಿವೃದ್ಧಿಗೋಸ್ಕರ ಹೆಚ್.ಕೆ.ಡಿ.ಬಿ., ಎಂ.ಎ.ಡಿ.ಬಿ., ಬಾರ್ಡರ್ ಡೆವಲಪ್‌ಮೆಂಟ್ ಏರಿಯಾ, ಎಂದು ಮಾಡಿ ಕೆಲವು ಕಾರ್ಯಕ್ರಮಗಳನ್ನು ಈ ಮಂಡಳಿಗಳ ಮುಖಾಂತರ ಜನಸಂಖ್ಯೆಯ ಆಧಾರದ ಮೇಲೆ ಅನುದಾನವನ್ನು ಒದಗಿಸಿ, ಪ್ರದೇಶಾಭಿವೃದ್ಧಿ ಕೆಲಸವನ್ನು ಕೈಗೊಳ್ಳುತ್ತಿದ್ದೆವು. ಅದರಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಭಾಗದ ಅಭಿವೃದ್ಧಿಗೋಸ್ಕರ ಸರ್ಕಾರ ನಿಗದಿ ಮಾಡಿದೆ. ಅದೇ ರೀತಿಯಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ರಚಿಸಿ ಅದರ ಮುಖಾಂತರ ಸರ್ಕಾರ ಅನುದಾನವನ್ನು ಕೊಟ್ಟು ಈ ಪ್ರದೇಶಾಭಿವೃದ್ಧಿಗೆ ಈಗಾಗಲೇ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಗಿದೆ. ಇದೇ ರೀತಿಯಲ್ಲಿ ಜಿಲ್ಲಾ ಪಂಚಾಯತ್ ಅಡಿಯಲ್ಲಿ ಆಯಾ ಜಿಲ್ಲೆಗೆ ಅನುಗುಣವಾಗಿ ನೀರಾವರಿ, ರಸ್ತೆ, ಕೃಷಿ, ಲೈಬ್ರರಿ, ಲೇಬರ್, ಎಸ್‌ಸಿ, ಎಸ್.ಟಿ. ಜನಾಂಗದವರ ಬಗ್ಗೆ ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸರ್ಕಾರ ಅನುದಾನವನ್ನು ಒದಗಿಸುತ್ತಿದೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಾನು ಕೇಳುವಂತಹ ಪ್ರಶ್ನೆಯ ಮೂಲ ಉದ್ದೇಶವೇನೆಂದರೆ ಭೂ ಪ್ರದೇಶದ ಪರಿಸ್ಥಿತಿ ಮತ್ತು ಅಲ್ಲಿಯ ಜನಜೀವನ ಪರಿಸ್ಥಿತಿಗೆ ಸರಿಯಾಗಿ ಯೋಜನೆಗಳನ್ನು ಹಾಕಿಕೊಳ್ಳಬೇಕು. ನಾನು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ವ್ಯವಸ್ಥೆಯ ಬಗ್ಗೆ ಮಾತನಾಡುತ್ತಿಲ್ಲ. ಅಲ್ಲಿ ಯೋಜನೆಗಳನ್ನು ಹಾಕಿಕೊಳ್ಳುತ್ತಾರೆ, ಹಣವನ್ನು ಹಾಕುತ್ತಾರೆ, ಆದರೆ ಅದು ಜನರಿಗೆ ಉಪಯೋಗವಾಗುತ್ತಿಲ್ಲ. ತಾವು ಭೂ ಪರಿಸ್ಥಿತಿಗೆ ತಕ್ಕಂತೆ, ಜನಜೀವನಕ್ಕೆ ತಕ್ಕಂತೆ ಸರಿಯಾಗಿ ಯೋಜನೆಗಳನ್ನು ಹಾಕಿಕೊಳ್ಳಬೇಕು. ನಾನು ಕೇಳುವಂಥಾದ್ದು ಹೊಸದಾಗಿ ರಸ್ತೆಗಳ ನಿರ್ಮಾಣವೆಂದರೆ ನಮ್ಮ ಬಯಲುಸೀಮೆಯಲ್ಲಿ ಎಷ್ಟು ಇಂಚು ಮಳೆ ಬೀಳುತ್ತದೆ, ಮಲೆನಾಡು ಪ್ರದೇಶದಲ್ಲಿ ಎಷ್ಟು ಇಂಚು ಮಳೆಯಾಗುತ್ತದೆ, ಮತ್ತೆ ಅಲ್ಲಿ ಪ್ರತಿ ಕಿ.ಮೀ.ಗೆ ಎಷ್ಟು ಹಣ ವೆಚ್ಚವಾಗುತ್ತದೆ, ಅದಕ್ಕೆ ಹಾಕುವಂತಹ ಹಣವೆಷ್ಟು? ಅದರ ಬಗ್ಗೆ ನಾನು ಕೇಳುತ್ತಿದ್ದೇನೆ.

ಶ್ರೀಮತಿ ಸುಮಾ ವಸಂತ್ : ಮಾನ್ಯ ಅಧ್ಯಕ್ಷರೆ, ಮಲೆನಾಡು ಅಭಿವೃದ್ಧಿ ಮಂಡಳಿ ಎಂದು ರಚಿಸಿ ಈ ಪ್ರದೇಶಕ್ಕೆ ಈಗಾಗಲೇ ಅನುದಾನವನ್ನು ಒದಗಿಸುತ್ತಿದೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಅಲ್ಲಿಯ ವಾಸ್ತವಾಂಶಕ್ಕೆ ಅನುಗುಣವಾಗಿ ಮಳೆ, ಮತ್ತೆ ಬೇರೆ ಬೇರೆ ಕಾರಣಗಳಿಂದ ವ್ಯತ್ಯಾಸವಾಗುತ್ತದೆ. ಮಾನ್ಯ ಚುದ್ರೇಗೌಡರೇ, ಹಿಂದಿನ ಸರ್ಕಾರವಿದ್ದಂತಹ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಆಯಾ ಜಿಲ್ಲೆಗಳಲ್ಲಿ "ಯೋಜನಾ ಸಮಿತಿಯನ್ನು" ರೂಪಿಸಬೇಕೆಂದು ಇತ್ತು. ಈ ವಿಚಾರವಾಗಿ ಕೆಲವು ಜಿಲ್ಲಾ ಪಂಚಾಯತ್‌ನಲ್ಲೂ ಕೂಡ ಚುನಾವಣೆಗಳು ಕೂಡ ಆಗಿತ್ತು. ಈಗ ಅದರ ಪರಿಸ್ಥಿತಿ ಏನಾಗಿದೆ? ಜಿಲ್ಲಾ ಪಂಚಾಯತ್‌ಗೆ ಸಂಬಂಧಪಟ್ಟಂತಹ ಜಿಲ್ಲೆಗಳಲ್ಲಿ ಈ ಯೋಜನೆಗಳನ್ನು ಯಾವ ರೀತಿಯಾಗಿ ಕೈಗೊಳ್ಳಬೇಕು, ಯಾವುದಕ್ಕೆ ಆದ್ಯತೆಯನ್ನು ಕೊಡಬೇಕು, ಈ ಯೋಜನೆಯನ್ನು ಹೇಗೆ ರೂಪಿಸಬೇಕು? ಎನ್ನುವುದರ ಬಗ್ಗೆ ಹಿಂದೆಯೇ ಮಾಡದಿದ್ದರೆ ಒಳ್ಳೆಯದಾಗುತ್ತಿತ್ತು. ಈಗ ಅದರ ಪರಿಸ್ಥಿತಿ ಏನಾಗಿದೆ ಅದನ್ನು ಮಾಡುವಂಥಾದ್ದಕ್ಕೆ ರಾಜ್ಯ ಸರ್ಕಾರ ಏನಾದರೂ ಪ್ರಯತ್ನ ಮಾಡುತ್ತಿದೆಯೇ? ಅದರ ಆಧಾರದ ಮೇಲೆ ಮುಂದಿನ ಯೋಜನೆಗಳನ್ನು ಅನುಷ್ಠಾನ ಮಾಡುವಂಥಾದ್ದು ಇದೆಯೇ?

ಶ್ರೀಮತಿ ಸುಮಾ ವಸಂತ್ : ಮಾನ್ಯ ಅಧ್ಯಕ್ಷರೆ, ಆ ರೀತಿಯಲ್ಲೂ ಯೋಜನೆಗಳನ್ನು ತಯಾರ ಮಾಡಲಾಗುತ್ತಿದೆ. ನಾನು ಇದನ್ನು ಪದೇ ಪದೇ ಹೇಳುತ್ತಿದ್ದೇನೆ. ಅದೇ ರೀತಿಯಲ್ಲಿ ಹೈದರಾಬಾದ ಕರ್ನಾಟಕ ಅಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿ, ಎಂದು ರಚಿಸಿದೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಪ್ರದೇಶಗಳಿಗೆ ಅನುಗುಣವಾ ಯೋಜನೆಗಳನ್ನು ತಯಾರಿಸುತ್ತಿದ್ದಾರಾ? ಇನ್ನು ಮುಂದೆ ಇದೇ ರೀತಿ ತಯಾರಿಸಬಹುದಾ? ಏಕೆಂದ ಬಯಲುಸೀಮೆಗೂ, ಮಲೆನಾಡಿಗೂ ಒಂದೇ ರೀತಿಯ ಯೋಜನೆಗಳನ್ನು ತಯಾರು ಮಾಡಬಾರದ ತಾವು ಭೂ ಪರಿಸ್ಥಿತಿ ಮತ್ತು ಜನಜೀವನಕ್ಕೆ ತಕ್ಕಂತೆ ಯೋಜನೆಯನ್ನು ಮಾಡಬೇಕೆಂದು ಮಾ ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಸುಮಾ ವಸಂತ್ : ಮಾನ್ಯ ಅಧ್ಯಕ್ಷರೆ, ನಾವು ಯೋಜನೆಗಳನ್ನು ಮಾಡುವಾಗ ಆ ಪ್ರದೇಶಗಳ ಅನುಗುಣವಾಗಿ, ಅದಕ್ಕೆ ಸಂಬಂಧಪಟ್ಟಹಾಗೆ ತಯಾರು ಮಾಡುತ್ತಿದ್ದೇವೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಸರ್ಕಾರದಿಂದ ಕರಾವಳಿ ಪ್ರದೇಶಗಳನ್ನು ಎಲ್ಲಾ ದಿಕ್ಕುಗಳಿಂದಲೂ ನಿರ್ಲಕ್ಷಿಸಿದೆ. ಈ ವಿಚಾರವಾಗಿ ನಾನು ವಿಶೇಷವಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತೋಟಗಾರಿಕೆ, ಮೀನುಗಾರಿಕೆ, ಪ್ರವಾಸೋದ್ಯಮ, ಇವುಗಳ ಮೂಲಕ ಕರ್ನಾಟಕ ರಾಜ್ಯಕ್ಕೆ ಮಾತ್ರವಲ್ಲ. ಇಡೀ ದೇಶಕ್ಕೆ ಒಳ್ಳೆಯ ರೀತಿಯಲ್ಲಿ ಫಾರಿನ್ ಎಕ್ಸ್‌ಚೆಂಜ್ ಗಳಿಸುವಂಥಾದ್ದಕ್ಕೆ ತಾಕತ್ತು ಇರುವಂಥಾದ್ದು. ಆದುದರಿಂದ ಕರಾವಳಿ ಪ್ರದೇಶಾಭಿವೃದ್ಧಿ ಮಂಡಳಿಯನ್ನು ವಿಶೇಷವಾಗಿ ನಿರ್ಮಾಣ ಮಾಡಬೇಕು, ಮತ್ತೆ ವಿಶೇಷವಾದಂತಹ ಅನುದಾನನ್ನು ಈ ಜಿಲ್ಲೆಗಳಿಗೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕು.

ಶ್ರೀಮತಿ ಸುಮಾ ವಸಂತ್ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಸದರಿ ಪ್ರಶ್ನೆಗೆ ಸಂಬಂಧಪಟ್ಟಿಲ್ಲವಾದ ಕಾರಣ ಮಾನ್ಯ ಸದಸರಿಗೆ ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ತರಿಸಿಕೊಡುತ್ತೇನೆ.

## ಚಿನ್ನಗಿರಿ ಮತಕ್ಷೇತ್ರದಲ್ಲಿ ಪಶು ಚಿಕಿತ್ಸಾ ಕೇಂದ್ರಗಳು

584 - ಶ್ರೀ ವಡ್ನಾಳ್ ರಾಜಣ್ಣ (ಚಿನ್ನಗಿರಿ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಚಿನ್ನಗಿರಿ ಮತಕ್ಷೇತ್ರದಲ್ಲಿ ಪಶು ಚಿಕಿತ್ಸಾ ಕೇಂದ್ರಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2. *ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು?*

3. *ಚಿನ್ನಗಿರಿ ಮತಕ್ಷೇತ್ರದಲ್ಲಿ ಯಾವ ಯಾವ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು?*

4. *ಚಿನ್ನಗಿರಿ ಮತಕ್ಷೇತ್ರದಲ್ಲಿರುವ ಪಶು ಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು? ಹಾಗೂ ಸದರಿ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಹಾಲಿ ಇರುವ ವೈದ್ಯರ ಸಂಖ್ಯೆ ಎಷ್ಟು?*

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

1. ಬಂದಿದೆ.

2. ಆಯವ್ಯಯ ಅಂದಾಜುಗಳ ಆಧಾರದ ಮೇಲೆ ಹಲವು ಪ್ರಾಥಮಿಕ ಪಶು ಕೇಂದ್ರಗಳನ್ನು ಹಂತಹಂತವಾಗಿ ಮೇಲ್ದರ್ಜೆಗೇರಿಸಲು ಸರ್ಕಾರವು ಪರಿಶೀಲಿಸುವುದು.

3. ಮಾದರಿಗನುಗುಣವಾಗಿ ಇದನ್ನು ಪರಿಗಣಿಸಲಾಗುವುದು.